Regd No M 129 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬಂತಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 31 ಸಂಚಿಕೆ 105] ಗುರುವಾರ 26-2-48 [ಬಿಡಿ ಪ್ರತಿ 3 ಪೈ

ಸ್ಟಾಲಿನ್ನರ ವೈಚಿತ್ರ್ಯ

ಸಂತಾಪ ಸೂಚಿಸದ ಏಕಮಾತ್ರ

ಮುಖಂಡ

ವಿಚಿತ್ರ ! ನಿಜವಾಗಿಯೂ ವಿಚಿತ್ರವೆನ್ನಬೇಕು. ಮಹಾತ್ಮಾ ಗಾಂಧಿಯವರ ಅಕಾಲ ನಿಧನಕ್ಕಾಗಿ ಇಡೀ ವಿಶ್ವವು ವಿಶ್ವದ ಮುಖಂಡರು ಶ್ರಾದ್ಧಾಂಜಲಿ ಅರ್ಪಿಸುತ್ತಿರುವಾಗ ಸಂತಾಪದ ಒಂದು ಮಾತನ್ನಾದರೂ ಆಡದ ವ್ಯಕ್ತಿಯೆಂದರೆ ರಷ್ಯದ ಮಾರ್ಷಲ್ ಸ್ಟೆಲಿನ್. ಅವರ ಈ ಮೌನವು ಕಾರಣವೇನಿರಬಹುದೋ ಅವರಿಗೇ ಗೊತ್ತು. ಈ ಕುರಿತು ಪ್ರಸ್ತಾಪಿಸುತ್ತ 'ಸಂಜಯ' ರು 'ನೆಶನಲ್ ಹೆರಾಲ್ಡ್' ಪತ್ರಿಕೆಯಲ್ಲಿ ಬರೆದ ಒಂದು ಉಲ್ಲೇಖ ಈ ರೀತಿಯಾಗಿದೆ.

' ಈವರೆಗೆ, ಗಾಂಧೀಜಿಯವರ ನಿಧನದ ಬಗ್ಗೆ ಸಂತಾಪ ಸೂಚಿಸದ ಏಕಮಾತ್ರ ಪ್ರಮುಖ ವ್ಯಕ್ತಿಯೆಂದರೆ ಯು. ಎಸ್. ಎಸ್. ಆರ್. ಆ ರಾಷ್ಟ್ರದ ಮುಖಂಡರು ಈವರೆಗೆ ಸಂತಾಪದ ಒಂದೇ ಒಂದು ಸುದ್ದಿಯನ್ನು ವ್ಯಕ್ತಪಡಿಸಿದುದಿಲ್ಲ. ಇಂಗ್ಲಾಂಡಿನ ಅರಸರು, ಸಂಯುಕ್ತ ಅಮೆರಿಕದ ಅಧ್ಯಕ್ಷರು, ಫ್ರೆಂಚ್ ಅಸೆಂಬ್ಲಿ ಅಧ್ಯಕ್ಷರು, ಬ್ರಿಸ್ ಪ್ರಧಾನಮಂತ್ರಿಗಳು, ಚೀನಾ ವ್ಯಕಾರ ಮಂಡಲದ ಅಧ್ಯಕ್ಷರು, ಇವರೆಲ್ಲಾ ವೈಯಕ್ತಿಕ ಸಂದೇಶಗಳನ್ನು ಕಳಿಸಿದ್ದಾರೆ. ಸ್ಟಾಲಿನ್ರು ಮಾತ್ರ ಈವರೆಗೆ ಮೌನಿಯಾಗಿದ್ದೇ ಧರಿಸಿದ್ದಾರೆ. ಅವರೊಂದಿಗೆ ಸಂಬಂಧವಿರಿಸಿಕೊಂಡಿರುವ ಅಮೆರಿಕಾದ ಅಧ್ಯಕ್ಷರು ರೂಸ್ವೆಲ್ಟರು ತೀರಿಕೊಂಡಾಗ ಸಹ | ಸ್ಟಾಲಿನ್ರು ಅವರ ಪತ್ನಿಗೆ ಸಂತಾಪಸೂಚಕ ಸಂದೇಶ ಕಳಿಸಿದ್ದರು. ಆದರೆ ಇಂದು ಆದ್ಯಾವ ಕಾರಣದಿಂದಲೋ ಸ್ಟಾಲಿನ್ರು ಈ ಖಂಡ ಮೌನ ಧರಿಸಿದ್ದಾರೆ. ಇಡೀ ಜಗತ್ತು ಗಾಂಧೀಜಿಯವರಿಗಾಗಿ ಶ್ರಾದ್ಧಾಂಜಲಿಯನ್ನರ್ಪಿಸುತ್ತಿದ್ದರೂ '

[ಪ್ರ]

Woodlands

Morning Shows at 10-30
or 4 Days From 27--2--48

— ಬೆಳಗಿನ ಪ್ರದರ್ಶನ —

ಲಲಿತ ಪವಾರ್ — ಮಾಧವ ಕಲೆ

ಪಾತ್ರವಹಿಸಿರುವ

ದುನಿಯಾ ಕ್ಯಾ ಹೈ

Resurrection Hindi)

ಸುದ್ದಿಗಳು

ಹಿಂದೂಸ್ಥಾನದಲ್ಲಿಯ ನಿರಾಶ್ರಿತರ ಸಹಾಯಕ್ಕಾಗಿ ಫ್ರೆಂಚ್ ಸರಕಾರದವರು 30 ಕೋಟಿ ಯೂನಿಟ್ಸ್ ಪೆನಿಸಿಲಿನ್ ವಸ್ತು ಗ್ಯಾನಿಡಾನದ 700 ಟ್ರೊಬುಗಳನ್ನು ಕಾಣಿಕೆಯಾಗಿ ಕೊಟ್ಟಿದ್ದಾರೆ.

ಪ್ಯಾಲಿಸ್ಟೈನ್‌ನಲ್ಲಿ ಶಾಂತಿ ನೆಲಸಲು ಸಂಪೂರ್ಣ ಸಹಕಾರ ಅವೇಕ್ಷಿಸಿಕ ಕೊಡುವುದು ಪಶ್ಚಿಮಾಸ್ಥೆ ಶಾಂತಿ ಸ್ಥಾಪನೆಗಾಗಿ ಸೇನೆ ಕಳಿಸಿದರೆ ಅಮೇರಿಕ ಅದನ್ನೂ ಕೂಡ ವುದು

ಹುಬ್ಬಳ್ಳಿ ಮಂಗಳೂರ ವಿಮಾನ ಕಡೆ ವಿಮಾನ ನಿಲ್ದಾಣ ಸ್ಥಾಪಿಸುವ ಡೊಮಿನಿಯನ್ ಪಾರ್ಲಿಮೆಂಟಿನಲ್ಲಿ ಕೇಳಲಾಯಿತು.

ಹೈದರಾಬಾದು ನಿಜಾಮರು ಸಂಸ್ಥಾನದಲ್ಲಿ ಲಂಚ ನಿರ್ಮೂಲನಕ್ಕಾಗಿ ಸಮಿತಿ ಮಾಡಿದ್ದಾರೆ

ಬೆಂಗಳೂರು — ತಾ | 23 ರಲ್ಲಿ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಂಸ್ಥಾನದ ಪ್ರಮುಖ ಬಟ್ಟೆ ವ್ಯಾಪಾರಿಗಳ ಸಭೆ ನಡೆಯಿತು ಬೊಂಬಾಯಿ ಅಹಮದಾಬಾದು ಮತ್ತು ಸಂಸ್ಥಾನದ ಹೊರಗಡೆಯಿಂದ ಬಟ್ಟೆಯನ್ನು ಯಾವ ಬಟ್ಟೆ ವ್ಯಾಪಾರಿಯಾದರೂ ಮಿಲ್ಲು ಹೊರತು ವ್ಯಾಪಾರಸ್ಥಳಗಳಿಂದ ತರಿಸಿಕೊಳ್ಳಲು ಸ್ವತಂತ್ರರೆಂದೂ ಬಟ್ಟೆಯನ್ನು ಒಂದ ಜೋನಿನಿಂದ ಸಾಗಿಸಲು ಬೊಂಬಾಯಿ ಟೆಕ್ಸ್‌ಟೈಲು ಕಮಿಷನರಿಂದ ರಹದಾರಿ ಪಡೆಯಬೇಕೆಂದೂ ತಿಳಿಸಿದರು

ಬೊಂಬಾಯಿ — ದಕ್ಷಿಣ ಆಫ್ರಿಕಾದಲ್ಲಿ ಭಾರತೀಯ ಸಮಸ್ಯೆ ಕುರಿತು ಭಾರತ-ದ ಆಫ್ರಿಕಾ ಜಂಕ್ಷನ್ ಸಂಘವನವಿದೆ ಎಂದು ಗವರ್ನರ್ ಮಹಾರಾಜ ಸಿಂಗ್ ರೋಟರಿ ಕ್ಲಬ್ಬಿನಲ್ಲಿ ನುಡಿದರು

ಪಾಕಿಸ್ತಾನದೊಡನೆ ಯುದ್ಧ ಎಂಬ ಮಾತುಗಳು ಕೇವಲ ಮಕ್ಕಳ ಮಾತಿನಂತಿವೆ ಎಂದು ಪಂ॥ ನೆಹರು ಜಲಂಧರನಲ್ಲಿ ಸೈನಿಕರನ್ನು ಕುರಿತು ಮಾಡಿದ ಭಾಷಣದಲ್ಲಿ ತಿಳಿಸಿದರು

ಬೆಂಗಳೂರು — ಹೋಟಲುಗಳನ್ನು ತೆಗೆಸುವ ಕಾಲ ಸಮಾರಂಭಗಳಲ್ಲಿ ಅತಿಥಿಗಳ ಸಂಖ್ಯೆ ಹಾಲಿನಿಂದ ತಯಾರಿಸುವ ಪದಾರ್ಥಗಳ ಬಗ್ಗೆ ಇದ್ದ ನಿರ್ಬಂಧಗಳನ್ನೆಲ್ಲಾ ತೆಗೆದುಹಾಕಲಾಗಿದೆ

ಭಾರತ ಸಮಾಜವಾದಿ ಪಕ್ಷದ ನಾಯಕ ಶ್ರೀ ಜೈಪ್ರಕಾಶ್ ನಾರಾಯಣ್ ಗಾಂಧೀಜಿ ಗತಿಸಿದ ಈ ದುರ್ದಿನಗಳಲ್ಲಿ ನೀವಾದರೂ ಎಂದು ದಾರಿ ತೋರಿದ ರಮಣ ಮಹರ್ಷಿ ಮತ್ತು ಅರವಿಂದಘೋಷ್‌ರನ್ನು ಪ್ರಾರ್ಥಿಸಿದ್ದಾರೆ

ಹೈದರಾಬಾದು— ನೀವು ಗಡಿಯಲ್ಲಿ ರಕ್ಷಣಾ ಹೋರಾಟ ನಡೆಸಲು ಮುಂದೆಬಾರದಿದ್ದರೆ, ಪಂದೆ ಹಿಂದೆ ಮಿಲಿಟರಿ ಶಿಕ್ಷಣ ಪಡೆಯುತ್ತಿರುವ ಮಹಿಳೆಯರೇ ನಿಮ್ಮ ಸ್ಥಾನದಲ್ಲಿ ನಿಲ್ಲುವರು ಎಂದು ಮುಸ್ಲಿಂ ಸಭೆಯಲ್ಲಿ ಇತ್ತೀಹಾದುಲ್ ಅಧ್ಯಕ್ಷರು ಮಾಡಿದ ಭಾಷಣದಲ್ಲಿ ತಿಳಿಸಿದರು.

ನತ್ಯಪ್ರೇಮಿ

ಶ್ರೀ

(ಮುಂದುವರಿದುದು)

— ಅಂಕ ೨ —

[ಸ್ವಪ್ನಳ ಅಂತಃಪುರದಲ್ಲಿ ಶಯನಗೃಹ, ಅಕೆಯು ಹಾಸಿಗೆಯ ಮೇಲೆ ಕುಳಿತು ದಿಂಬಿಗ ಒರಗಿಕೊಂಡು ಉದ್ಯಾನದ ಕಡೆಗೆ ನೋಡುತ್ತಿದ್ದಾಳೆ. ಅಕೆಯ ಸಖಿಯು ಶಯನಗೃಹವನ್ನು ಪ್ರವೇಶಿಸಿತಾಯಿ ! ಮಾಳವದೇಶಾಧಿಪತಿಯೂ ಘೂರ್ಜರ ರಾಜಕುಮಾರನೂ ದಕ್ಷಿಣ ಭಾರತ ಚಕ್ರವರ್ತಿಯನ್ನು ಖೂನಿಮಾಡುವ ಯೋಜನೆಯಲ್ಲಿದ್ದಾರೆ.

ಸ್ವಪ್ನ ದಕ್ಷಿಣ ಭಾರತ ಚಕ್ರವರ್ತಿಯನ್ನೇ ! ಏಕಂತೆ ?

ಸಖಿ.... ನಿನ್ನಿಂದ ಬೈಸಿಕೊಂಡಿದ್ದಕ್ಕಾಗಿ ಅವನಲ್ಲಿ ಅವನಿಗೆ ಹೊಟ್ಟೆಕಿಚ್ಚಾಗಿದೆ.

ಸ್ವ— [ತನ್ನ ಮುಖವನ್ನು ಮರೆಮಾಡಿಕೊಂಡು] ನನ್ನ ಮನಸ್ಸು ಅವರ ಕಡೆ ಇಲ್ಲ

ಸಖಿ.... ತಾಯಿಾ ನಾವು ಇಂದು ಅರಮನೆಯಿಂದ ಒಂದಾಗಿನಿಂದಲೂ ಸಂತೋಷಚಿತ್ತರಾಗಿದುವಂತೆ ಕಾಣಬರುತ್ತಿಲ್ಲ. ನಿನ್ನ ಮನೋವೇದನೆಯು ಎಂತಹುದೋ ದಯವಿಟ್ಟು ತಿಳಿಸಿರಿ

ಸ್ವಪ್ನ—(ಸ್ವಲ್ಪ ನಿದಾನಿಸಿ] ಆಗಲಿ ಹೇಳುತ್ತೇನೆ ನಾನು ಒಬ್ಬ ಮನುಷ್ಯನನ್ನು ಪ್ರೀತಿಸಿದ್ದೇನೆ.

ಸಖಿ— ಯಾರು ಅವರು ? ಯೂರೋಪಿನ ಚಕ್ರವರ್ತಿಯೇ ?

ಸ್ವಪ್ನ.... ಅಲ್ಲ ಅಲ್ಲ ಆ ಯೊಂಟನನ್ನಲ್ಲ. ಕೇಳು. ಅರಮನೆಯಿಂದ ಇಲ್ಲಿಗೆ ಬರಲು ಪಲ್ಲಕ್ಕಿಯಲ್ಲಿ ಕುಳಿತುಕೊಂಡಾಗ ಒಬ್ಬ ಮನುಷ್ಯನು ಆ ಕಡೆಯಲ್ಲಿ ಹೋದನು. ಅವನ ಎಂಥಾ ಮುಖ ಅದು ಅವನನ್ನು ನೋಡುವುದೇ ತಡ ನನ್ನ ಮನಸ್ಸು ಅವನಲ್ಲಿ ನಿಲ್ಲಿಸಿತು. ಅವನು ನನ್ನ ಕಡೆ ನೋಡಿದನು. ನಾನು ನನ್ನ ಕೃಪಾವೀಕ್ಷಣೆಯನ್ನು ಬೀರಿದೆನು, ಆದರೂ ಉಪಯೋಗವಾಗಲಿಲ್ಲ, ಅವನ ದೃಷ್ಟಿಯಲ್ಲಿ ಕಾಮೋದ್ರೇಕದ ಕುರುಹು ಕಾಣಬರಲಿಲ್ಲ ಅಗುವನ್ನು ನೋಡುವಂತೆ ಅಶ್ಲ

ಪೂರಿತ ದೃಷ್ಟಿಯಲ್ಲಿ ನೋಡಿದನು. ಸಮ್ಮ ಉದ್ಯಾನದ ಮಾರ್ಗದಲ್ಲಿ ಹೊರಟು ಅದೃಶ್ಯನಾದನು. ನನ್ನ ಮನಸ್ಸು ಆತನಲ್ಲಿ ಲೀನವಾಗಿದೆ

ಸಖಿ— ಆತನು ಹೇಗಿದ್ದ ತಾಯಿ?

ಸ್ವಪ್ನ— ನಾನು ವರ್ಣಿಸಲಾರೆ. ಅವನಲ್ಲಿ ಸ್ವರ್ಗೀಯ ಲಕ್ಷಣಗಳಿದ್ದವು ಎಂದು ಪಾತ್ರ ಹೇಳಬಲ್ಲೆ: ನಾನು ಆತನೊಂದಿಗೆ ಅನಂಗಸುಖವನ್ನನುಭವಿಸಲು ನೀನು ಅವನನ್ನು ಇಲ್ಲಗೆ ಕರೆತರುವೆಯಾ ?

ಸಖಿ— ತಾಯಿ ? ನಾನು ನಿಮ್ಮ ಆಜ್ಞಾಪಾಲಕಳು. ಆದರೆ ಯಾರೆಂಬುದನ್ನು ಅರಿಯದೆ ಕರೆತರುವುದು ಹೇಗೆ ಸಾಧ್ಯ ?

[ಸ್ವಲ್ಪ ಹೊತ್ತು ಮೌನ. ಸ್ವಪ್ನಳು ಉದ್ಯಾನವನದ ಕಡೆ ನೋಡುತ್ತಿದ್ದಾಳೆ. ಚಂದ್ರನು ಪೂರ್ಣಕಳೆಗಳೊಂದಿಗೆ ವಿರಾಜಿಸುತ್ತಿದ್ದಾನೆ. ಅದ್ದೇ ಸಮಯದಲ್ಲಿ ಒಂದು ವೃಕ್ಷದ ಕೆಳಗೆ ಒಬ್ಬ ಮನುಷ್ಯನು ಕಾಣಬರುತ್ತಾನೆ. ಸ್ವಪ್ನಳು ಸಖಿಗೆ ಅತನನ್ನು ತೋರಿಸುತ್ತಾಳೆ)

ಸ್ವಪ್ನ— ನೋಡು, ನೋಡು ! ಆತನೇ ! ಎಲ್ಲಿಗಾದರೂ ತಪ್ಪಿಸಿಕೊಂಡು ಹೋದಾನು. ನಾನೇ ಓಡಿಹೋಗುತ್ತೇನೆ. ನನ್ನ ಆಶಾವೂರ್ತಿಯಾಗಬೇಕು. [ಎದ್ದು ತ್ವರಿತಗತಿಯಿಂದ ಮೇಲಿಂದ ಎಳುತ್ತಾಳೆ]

ಸಖಿ— ಬೇಡಿ ತಾಯಿ ಬೇಡಿ. ಆತನು ಯಾರೆಂಬುದನ್ನು ಅರಿಯಲ್ಲಿ ನೀವು ಹೀಗೆ ಮಾತನಾಡುವುದಿಲ್ಲ.

ಸ್ವಪ್ನ— ಆತನು ಯಾರು ?

ಸಖಿ— ಬುದ್ಧನ ಪೃಥಮ ಶಿಷ್ಯನಾದ ಉಪಗುಪ್ತ ಮಹಾಶಯನು.

[ತೆರೆ ಬೀಳುವುದು]

[ಮುಂದುವರಿಯುವುದು

ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುವವರ ಬಟ್ಟೆಗಳು ಇನ್ನು ಮುಂದೆ ಬ್ರಿಟನ್ನಿನಲ್ಲಿಯ ಫ್ಯಾಕ್ಟರಿಗಳಲ್ಲಿ ಸುಲಭವಾಗಿ [illegible] ಮಾಡಲ್ಪಡುವುವು. ಬಟ್ಟೆಬರೆ [illegible] ದಕ್ಕಾಗಿಯೇ ಸೋಮವಾರ ರಜೆ [illegible] ಡುವರು.

ವು ಡ್ ಲ್ಯಾಂಡ್ಸ್

20—2—48 ರಿಂದ

ಇಂದುಮತಿ, ರೆಹಾನಾ
ನಾಜಿರ್ ಖಾ
ಪಾತ್ರವಹಿಸಿರುವ

ಪೆ ನಾ ಯ್

(ಅಮೋಘ ಹಿಂದೀ ಚಿತ್ರ)

ಪ್ರತಿ ದಿನ 3 ಆಟಗಳು

—An Evershine Release —

ಶಕ್ತಿಸುಧಾ

ಶಕ್ತಿಹೀನತೆಗೆ ಸಂಜೀವನ

ಸ ತ್ಯ ವಾ ದಿ
ದಿನ ಪತ್ರಿಕೆ. ತಿಂಗಳಿಗೆ ಆರಾಣೆ

ಸೋವ.ವಾರ ಸಂಚಿಕೆ ವಾರ್ಷಿಕಚಂದಾ ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1-13-0

At Opera

From 25—2—48

ರಾಮಚಂದ್ರಕ್, ಸುಶೀಲಾದೇವಿ
ಕೆ. ವೆಂಪಾಳ್, ಕಾಳಿ ಎನ್. ರತ್ನಂ
ಪಾತ್ರವಹಿಸಿರುವ

ದಿವಾನ್ ಬಹದ್ದೂರ್

(ತಮಿಳು)

ಪ್ರತಿ ದಿನ 3 ಆಟಗಳು

Save the Cow

ಗೋ ವಧೆ ನಿಲ್ಲಲಿ

Edited, Printed and Published by M S Krishna Rao at the Satyavadi Press Chamaraja Agrahara

ಹಡಗು ಮಾರ್ಕಿನ ಹಿಂಗಿನ ಪುಡಿ

ಹೆಚ್ಚಿನ ಗುಣವುಳ್ಳದ್ದು



ಈ ಹಿಂಗಿನ ಪುಡಿ ನೀರನ್ನು ಸೇರಿಸದೆ ತಯಾರಿಸಿದ ಶಾಸ್ತ್ರೀಯ ಪರಿಶುದ್ಧವಾದದ್ದು. ಎಲ್ಲಾ ಸನಾತನವ್ಯಂಜನಗಳಲ್ಲೂ ಉಪಯೋಗಿಸಲರ್ಹವಾದುದು ಆಹಾರ ಸನಾರ್ಥಗಳಿಗೆ ಒಂದು ಚಿಟಿಗೆ ಪುಡಿಯನ್ನು ಸೇರಿಸಿದ್ದೇ ಆದರೆ, ಅತಿ ಸುಮನೋಹರ ವಾಸನೆಯನ್ನು ಮತ್ತು ರುಚಿಯನ್ನು ಕೊಡುತ್ತದೆ. ದೇಹದ ಎಲ್ಲಾ ವ್ಯಾಧಿಗಳಿಗೂ ಉಪಯುಕ್ತವಾದ ಸಂಸಾರದೆ ಔಷಧಿ. ಒಂದು ಸಲ ಉಪಯೋಗಿಸಿದಲ್ಲಿ ಮತ್ತೆ ಬೇರಾವುದನ್ನೂ ಉಪಯೋಗಿಸದಂತೆ ಮಾಡಿ, ವುದಲ್ಲದೇ. ಇದನ್ನೇ ಸದಾ ಉಪಯೋಗಿಸುವಂತೆ ಪ್ರೇರೇಪಿಸುವುದು ಒಂದು ಪೌಂಡು ಈ ಹಿಂಗು ನಾಲ್ಕು ಪೌಂಡ ಬಿಳೀ ಹಿಂಗಿಗೆ ಸಮಾನವಾದುದು.

ಎಲ್ಲಾ ಪ್ರಮುಖ ವ್ಯಾಪಾರಸ್ಥರಲ್ಲಿಯೂ ಒಂದು ಪೌಂಡು, ಓಂ ಪೌಂಡು ಸೇರು ಅರ್ಧ ಸೇರು ಒಂದು ಪಲಂ (ಪ್ಯಾಕೆಟ್ಟುಗಳಲ್ಲಿ) ದೊರೆಯುತ್ತದೆ ಒಂದು ಪೌಂಡಿನ ಬೆಲೆ ರೂ. 3—8—0

ನಮ್ಮ ಎ ಮತ್ತು ಟಿ. ಜಿ. ಮಾರ್ಕಿನ ಬಿಳೀ ಹಿಂಗು ಮತ್ತು ನಮ್ಮ ಶ್ರೀ ಓಂ ಮಾರ್ಕಿನ ಶುದ್ಧ ಕೇಸರಿ, ಸರ್ವ ಮಾರ್ಕಿನ ಕೇಸರಿ ಮತ್ತು ಸುವಾಸನೆ ಅಡಿಕೆ ಪುಡಿ ನಮ್ಮ ವೈಶಿಷ್ಟ್ಯ,

ವಲ್ಲಭದಾಸ್ ತೇಜ್ ಪಾಲ್
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು

SHAKTI SUDHA

A Superb TONIC

ಅಂದ, ಚಂದ, ಗುಣ, ಇವೆಲ್ಲಕ್ಕೂ

ಮೈಸೂರು ಮರದ ಸಾಮಾನುಗಳು

ಸಹಜವಾದ ಅಚ್ಚುಕಟ್ಟು, ನಾಜೂಕಾದ ಮೈಕಟ್ಟು
ಸೌಂದರ್ಯ, ನಿಸ್ಸಂಶಯವಾದ ಗುಣ. ಇವೆಲ್ಲವನ್ನೂ ಹೊಂದಿರುವುವು

ಉಪಯೋಗಿಸುವವರ ಅನುಕೂಲಾದಿಗಳನ್ನು ವಿಮರ್ಶಿಸಲಿ
ಅವರವರ ಇಷ್ಟಾನುಗುಣವಾಗಿ, ಕುಶಲಗಾರರಿಂದ ಕೆಲಸಗಾರರಿಂದ
ಸಾಮಾನುಗಳನ್ನು ತಯಾರಿಸಿ ಕೊಡುತ್ತೇವೆ.

ಶ್ರೀ ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟ್
ಮೈಸೂರು